ಅಪಾರ್ಟ್‌ಮೆಂಟಿನ ಎರಡನೆ ಅಂತಸ್ತಿನಲ್ಲಿರುವ ಸುಧೀರ ಅಷ್ಟಾಗಿ ಲಿಫ್ಟ್ ಬಳಸುವುದಿಲ್ಲ. ಒಂದನೇ ಅಂತಸ್ತಿಗೆ ಮೆಟ್ಟಲಿಳಿದು ತಿರುಗಿಕೊಳ್ಳುವಾಗ ಅಚ್ಯುತ ಮೆನನ್ನರ ಫ್ಲಾಟಿನ ಬಾಗಿಲು ತೆರೆದಿರುವುದು ಮತ್ತು ಅದರಿಂದ ಮಾತಿನ ಭರಾಟೆ ನುಗ್ಗಿ ಬರುತ್ತಿರುವುದು ಕಿವಿಗೆ ಬಿದ್ದು, ಇವತ್ತು ರಾತ್ರಿಯ ವಿಮಾನದಲ್ಲಿ ಅವರ ಮಕ್ಕಳಿಬ್ಬರು ಅಮೆರಿಕಕ್ಕೆ ಮರಳಿ ಹೋಗುವುದು, ಸಂಗಡ ಇವರೂ ಹೋಗಲಿರುವುದೆಲ್ಲ ನೆನಪಾಗಿ ಅವರಿಗೆ ವಿದಾಯದ ಎರಡು ಮಾತು ಹೇಳಬೇಕು ಅನಿಸಿ ಅತ್ತ ತಿರುಗಿದ. ಉಪ್ಪಿನಕಾಯಿ ಬಾಟಲುಗಳು, ಹಪ್ಪಳದ ಕಟ್ಟುಗಳು, ಸಂಡಿಗೆ, ಖಾರದಪುಡಿ, ಸಾಂಬಾರುಪುಡಿ ಇನ್ನೂ ಏನೇನೋ ಹರಡಿದ್ದರ ನಡುವೆ ದೇವಕಿಮಾಮಿ ಕುಳಿತು ವಿಂಗಡಿಸಿ ಹಂಚಿ ಪ್ಯಾಕು ಮಾಡುವುದರಲ್ಲಿ ಸುಸ್ತಾದವರಂತಿದ್ದರು. ‘ಬಾರಪ್ಪಾ... ಸುಧೀರ್, ಬಾ... ಬಾ... ಎಲ್ಲಾ ಇವರಿಗೆ ಕಳಿಸಿಕೊಡೋ ತಯಾರಿ. ಮೇಕ್ ಇನ್ ಇಂಡಿಯ; ಬೇಕ್ ಇನ್ ಯುಎಸ್ಎ. ಇಲ್ನೋಡು, ಈ ಮೂಲೇಲಿರೋದು ಸ್ಯಾಟಿಗೆ, ಆಕಡೇದು ರೂನಿಗೆ. ರಸಂ, ಸಾಂಬಾರು ಬೇಕು ಅಂತ ನಮಗೆ ಬಯಕೆ ಸುರುವಾದ್ರೆ ಮತ್ತೆ ಹ್ಯಾಗೆ?... ಹಹ್ಹಹ.’ ಹರಿಯದಿದ್ದರೂ ಅತ್ತಿತ್ತ ಸುಮ್ಮನೇ ಓಡಾಡುತ್ತಾ ಗಡಿಬಿಡಿಯಲ್ಲಿದ್ದಂತಿದ್ದರು ಅಚ್ಯುತ ಮೆನನ್.

‘ಅಯ್ಯೋ ರಾಮಾ! ನಾಲ್ಗೆ ಹೊರಳದ್ದಕ್ಕೆ ಅಮೆರಿಕದವ್ರು ಸ್ಯಾಟಿ ರೂನಿ ಅಂತೆಲ್ಲಾ ಅಂದ್ರೆ ಹುಟ್ದಾಗ ಬೆಳ್ಳಿ ನಾಣ್ಯದಲ್ಲಿ ಜೇನುತುಪ್ಪ ನೆಕ್ಸಿದ ನಾಲ್ಗೆ; ನೀವೂ ಹಾಗೇ ಅನ್ನೋದಾ?’ ಸಾಮಾನು ಜೋಡಿಸುವ ಕೆಲಸದಲ್ಲಿ ತುರಿಸಿಕೊಳ್ಳಲು



ಚಿತ್ರಗಳು : ಪರಮೇಶ ಜೋಳದ್